ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ4(2)ಸಂವಿಧಾನದಿನ:33/17-18 ದಿನಾಂಕ:11-12-2018

**ಸುತ್ತೋಲೆ**

ವಿಷಯ: ರಾಜ್ಯದ ಎಲ್ಲಾ ಶಾಲೆಗಳಲ್ಲಿ "ಸಂವಿಧಾನ ದಿನವನ್ನು" ಆಚರಿಸುವ ಕುರಿತು.

ಉಲ್ಲೇಖ: 1.ನಿರ್ದೇಶಕರು, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ನವದೆಹಲಿ ಇವರ ಪತ್ರ ಸಂಖ್ಯೆ:2-7/2016-EE.3ದಿನಾಂಕ:22.11.2016

2. ಆಶಿಷ್ ಪಾಟೀಲ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸಿ.ಎಮ್.ಸಿ.ಎ ರವರ ಮನವಿ ದಿನಾಂಕ:28/11/2018

*****

ರಾಜ್ಯದ ಎಲ್ಲಾ ಶಾಲೆಗಳಲ್ಲಿ ದಿನಾಂಕ:26/01/2019ರೊಳಗೆ ಸಂವಿಧಾನ ದಿನವನ್ನು ಆಚರಿಸಿ. ಸಂವಿಧಾನದ ಬಗ್ಗೆ ಮತ್ತು ಅದರ ಕೊಡುಗೆಯ ಬಗ್ಗೆ ನಾವೆಲ್ಲರೂ ತಿಳಿದಿರಬೇಕಾಗಿರುತ್ತದೆ. ಸಾರ್ವಜನಿಕರಲ್ಲಿ ಸಾಕಷ್ಟು ಜನರಿಗೆ ನಮಗೆ ಯಾವ ಹಕ್ಕುಗಳಿವೆ ಹಾಗೂ ಕರ್ತವ್ಯಗಳಿವೆ ಎಂಬುದು ತಿಳಿದಿರುವುದಿಲ್ಲ. ಆದ ಕಾರಣ ನಮ್ಮ ಸಂವಿಧಾನದ ಬಗ್ಗೆ ಬೋಧಿಸುವ ಮತ್ತು ಅದರ ಪ್ರಾಮುಖ್ಯತೆಯ ಅರಿವು ಮೂಡಿಸುವುದಾಗಿದೆ. ನಮ್ಮ ಸಂವಿಧಾನದ ಆಶಯಗಳನ್ನು ಪಾಲಿಸುವುದು ಮತ್ತು ಈಡೇರಿಸುವುದು ಎಲ್ಲರ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುತ್ತದೆ. ನಮ್ಮ ಸಂವಿಧಾನದ ಪ್ರಸ್ತಾವನೆಯು ಅದರ ಉದ್ದೇಶ ಮತ್ತು ತತ್ವಗಳನ್ನು ಸಾರಂಶೀಕರಿಸುತ್ತದೆ. ಹಾಗೆಯೇ ನಮ್ಮ ಸಂವಿಧಾನದ ಮೂಲ ಸಿದ್ಧಾಂತವು ಪ್ರಜೆಗಳ ಸಂರಕ್ಷಣೆ ಹಾಗೂ ಪ್ರತಿ ಪ್ರಜೆಯು ತನ್ನ ಹಕ್ಕುಗಳನ್ನು ಪಡೆದುಕೊಳ್ಳುವುದು ಮತ್ತು ಮತ್ತೊಬ್ಬ ಪ್ರಜೆಯ ಹಕ್ಕುಗಳ ಉಲ್ಲಂಘನೆಯಾಗದ ರೀತಿಯಲ್ಲಿ ನಡೆದುಕೊಳ್ಳಬೇಕಾಗಿರುತ್ತದೆ. ಸಂವಿಧಾನದ ಮೂಲ ತತ್ವಗಳಾದ **ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ಸಮಾನತೆ, ಭ್ರಾತೃತ್ವತೆ** ಇವುಗಳನ್ನು ಎತ್ತಿ ಹಿಡಿಯಬೇಕಾಗಿರುತ್ತದೆ. ಈ ಸಂಬಂಧ **26/01/2019 ರೊಳಗೆ ಸಂವಿಧಾನ ದಿನವನ್ನು** ಆಚರಿಸಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಏರ್ಪಡಿಸಿ ವಿದ್ಯಾರ್ಥಿಗಳಿಗೆ ಸಂವಿಧಾನದ ಬಗ್ಗೆ ಅರಿವು ಮೂಡಿಸುವುದು.

- **ಸಂವಿಧಾನದ ಪ್ರಸ್ತಾವನೆಯನ್ನು ಶಾಲಾ ಪ್ರಾರ್ಥನಾ ಸಮಯದಲ್ಲಿ ಜೋರಾಗಿ ಓದಬೇಕು.**
- **ಸಂವಿಧಾನದ ಪ್ರಮುಖ ಲಕ್ಷಣಗಳ ಬಗ್ಗೆ ತಿಳಿಸಿಕೊಡುವುದು.**
- **ಸಂವಿಧಾನದ ಬಗ್ಗೆ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.**

1. ಶಾಲಾ ಮಕ್ಕಳಿಂದ ಕೆಳಕಂಡ ವಿಷಯಗಳ ಸಂಬಂಧ ಪ್ಲಕಾರ್ಡ್‌ಗಳ ಮೂಲಕ ಪ್ರದರ್ಶಿಸುವುದು.

1. **ಪ್ಲಕಾರ್ಡ್ : ಸ್ವಾತಂತ್ರ್ಯ**
2. **ಪ್ಲಕಾರ್ಡ್ : ನ್ಯಾಯ.**
3. **ಪ್ಲಕಾರ್ಡ್ : ಮುಕ್ತತೆ,**
4. **ಪ್ಲಕಾರ್ಡ್ : ಸಮಾನತೆ.**
5. **ಪ್ಲಕಾರ್ಡ್ : ಭ್ರಾತೃತ್ವತೆ**

6. **"ನನ್ನ ದೈನಂದಿನ ಜೀವನದಲ್ಲಿ ನನ್ನ ಸಂವಿಧಾನ"** ಎಂಬ ವಿಷಯದ ಬಗ್ಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸುವುದು

ಸಂವಿಧಾನದ ದಿನದಂದು ರಾಜ್ಯದ ಎಲ್ಲಾ ಶಾಲೆಯ ಮಕ್ಕಳು ಸಹ ಮೇಲ್ಕಂಡ ಚಟುವಟಿಕೆಗಳಲ್ಲಿ ಭಾಗವಹಿಸಿ ಕಡ್ಡಾಯವಾಗಿ ದಿನಾಂಕ 26ನೇ ಜನವರಿ 2019 ರೊಳಗೆ "ಸಂವಿಧಾನ ದಿನವನ್ನು" ಆಚರಿಸುವಂತೆ, ತಮ್ಮ ಜಿಲ್ಲೆಯ ಎಲ್ಲಾ ಶಾಲಾ ಮುಖ್ಯ ಶಿಕ್ಷಕರುಗಳಿಗೆ ಸೂಚನೆ ನೀಡಲು ತಿಳಿಸುತ್ತಾ, ಸಂಬಂಧಿಸಿದ ಕಾರ್ಯಕ್ರಮ ನಡೆಸಿದ ನಂತರ ವರದಿಯನ್ನು ಮತ್ತು ಛಾಯಾಚಿತ್ರಗಳನ್ನು ದಾಖಲೀಕರಣಗೊಳಿಸಿ, ನಿರ್ದೇಶಕರು, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ನವದೆಹಲಿ ರವರಿಗೆ ಒಂದು ಪ್ರತಿ ಹಾಗೂ ಈ ಕಛೇರಿಗೆ ಒಂದು ಪ್ರತಿಯೊಂದಿಗೆ ವರದಿ ಮಾಡಲು ತಿಳಿಸಿದೆ.

ಮೇಲ್ಕಂಡ ಚಟುವಟಿಕೆಗಳನ್ನು ನಡೆಸಲು ಕಾರ್ಯಸೂಚಿಗಳಿರುವ ಪಟ್ಟಿಯನ್ನು ಇಲಾಖಾ ವೆಬ್-ಸೈಟ್ (www.schooieducation.kar.nic.in ನಲ್ಲಿ ಪ್ರಕಟಿಸಲಾಗಿದೆ. ಸದರಿ ಕಾರ್ಯಸೂಚನೆಗಳನ್ನು ಶಾಲಾ ಮುಖ್ಯ ಶಿಕ್ಷಕರುಗಳು ಅನುಸರಿಸಿ ದಿನಾಂಕ:26ನೇ ಜನವರಿ 2019 ರೊಳಗೆ ಸಂವಿಧಾನ ದಿನ ಆಚರಣೆಗೆ ಕ್ರಮ ವಹಿಸಲು ತಿಳಿಸಿದೆ.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

ನಿರ್ದೇಶಕರು(ಪ್ರೌಢ ಶಿಕ್ಷಣ)

**ಗೆ**

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ ರವರಿಗೆ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ.
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಆಶಿಷ್ ಪಾಟೀಲ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸಿ.ಎಮ್.ಸಿ.ಎ#346, 3ನೇ ಕ್ರಾಸ್, 4ನೇ ಬ್ಲಾಕ್, ಕೋರಮಂಗಲ ಬೆಂಗಳೂರು.
2. ಕಛೇರಿ ಪ್ರತಿ.